# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಫೆಬ್ರವರಿ 2020**, ಬೆಂಗಳೂರು, ಸಂಪುಟ 5, ಸಂಚಿಕೆ 10, ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ
Kannada monthly, **10 February 2020**, Bangaluru, Vol. 5, No.10, Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500. Subscription :Annual Rs. 30; Life : Rs. 500/-
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್. Published by: Karnataka Vipassana Prachara Samiti Trust.

**ಧಮ್ಮ ಪದಗಳು**

| | |
|---|---|
| ಚಾತುನ್ನಮ್, ಭಿಕ್ಖವೇ, ಅರಿಯಸಚ್ಚಾನಮ್<br>ಅಪ್ಪಟಿವೇಧಾ ಏವಮಿದಮ್<br>ದೀಘಮದ್ಧಾನಮ್ ಸಂಧಾವಿತಮ್<br>ಮಾಮನ್ಚೇವ ತುಮ್ಹಾಕಂಚಾ. | ಭಿಕ್ಖುಗಳೇ ನಾಲ್ಕು ಆರ್ಯಸತ್ಯಗಳನ್ನು ಅರ್ಥಮಾಡಿಕೊಳ್ಳದೆ<br>ಮತ್ತು ಒಳಹೊಕ್ಕು ನೋಡದೆ, ನಾನು ಮತ್ತು ನೀವು<br>ಇಬ್ಬರೂ ದೀರ್ಘಕಾಲದವರೆಗೆ ಈ ಸಂಸಾರದಲ್ಲಿ ಓಡುತ್ತಾ,<br>ಅಲೆದಾಡುತ್ತ ಇದ್ದೇವೆ. |

**ಮಹಾವಗ್ಗಪಾಲಿ, ಮಹಾಪರಿನಿಬ್ಬಾಣಸುತ್ತಂ – 155**

## ಧಮ್ಮವು ಮರಳಿದ ಮತ್ತು ಹರಡಿದ ಸುವರ್ಣ ಮಹೋತ್ಸವ ವರ್ಷ : ನಮ್ಮ ಆಚಾರ್ಯರಾದ ಶ್ರೀ ಗೋಯಂಕಾಜಿಯವರಿಗೆ ಕೃತಜ್ಞತೆಗಳನ್ನು ಅರ್ಪಿಸಲು ಒಂದು ಅದ್ಭುತ ಸಂದರ್ಭ.

**(ಡಿಸೆಂಬರ್, 2018ರ ಇಂಗ್ಲಿಷ್ 'ವಿಪಶ್ಯನ ವಾರ್ತಾಪತ್ರ' ದಿಂದ ಅನುವಾದಿಸಲಾಗಿದೆ.)**

ವಿಪಶ್ಯನ ಧ್ಯಾನವು ಭಾರತಕ್ಕೆ ಮರಳಿದ ಮತ್ತು ವಿಶ್ವದಾದ್ಯಂತ ಹರಡಿದ ಐವತ್ತನೇ ವರ್ಷದ ಸುವರ್ಣ ಮಹೋತ್ಸವವನ್ನು, ಜುಲೈ 3, 2018 ರಿಂದ ಜುಲೈ 2, 2019ರ ವರ್ಷಪೂರ್ತಿ ಆಚರಿಸಲಾಯಿತು. ಇದು ಗೋಯಂಕಾಜಿಯವರ ಎಲ್ಲಾ ವಿದ್ಯಾರ್ಥಿಗಳ ಪ್ರತಿನಿತ್ಯದ ಅಭ್ಯಾಸವನ್ನು ಬಲಗೊಳಿಸುವುದರಲ್ಲಿ ಸಹಕಾರಿಯಾಗುತ್ತದೆ ಎಂದು ಆಶಿಸಲಾಗಿದೆ. ಈ ಉದ್ದೇಶ ಸಾಧನೆಗಾಗಿ ಗ್ಲೋಬಲ್ ವಿಪಶ್ಯನ ಪಗೋಡಾದಲ್ಲಿ ವರ್ಷ ಪೂರ್ತಿ, ಪ್ರತಿ ದಿನ ಒಂದು ದಿನದ ಶಿಬಿರ ನಡೆಸಲಾಯಿತು. ಹಳೆಯ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದರು. ಇತರೆ ಸ್ಥಳಗಳಲ್ಲೂ ಧ್ಯಾನ ಸಾಧಕರು ಈ ಸುವರ್ಣ ಮಹೋತ್ಸವದ ಸಂಭ್ರಮಾಚರಣೆ ಮಾಡಿದರು. ಇದು ನಾವು ಪೂಜ್ಯ ಗೋಯಂಕಾಜಿಯವರನ್ನು ಸ್ಮರಿಸುವ ಮತ್ತು ಅವರಿಗೆ ನಿಜವಾದ ಕೃತಜ್ಞತೆ ತೋರಿಸುವ ರೀತಿ. (ಕೆಲವು ಮಾರ್ಪಾಡು ಮಾಡಲಾಗಿದೆ.)

ಜಗತ್ಪ್ರಸಿದ್ಧ ವಿಪಶ್ಯನ ಆಚಾರ್ಯರಾದ ಶ್ರೀ ಸತ್ಯನಾರಾಯಣ ಗೋಯಂಕರವರು ಪರಿಶುದ್ಧ ಧರ್ಮದ ಮಾರ್ಗಕ್ಕೆ ಬರುವ ಮುಂಚಿನ ಅವರ ವ್ಯಕ್ತಿಚಿತ್ರವನ್ನು ಇಲ್ಲಿ ಕೊಡಲಾಗಿದೆ. ಬಹಳ ಚಿಕ್ಕ ವಯಸ್ಸಿನಿಂದಲೇ ಭಕ್ತಿಯ ಭಾವ ತೀವ್ರತೆಯಲ್ಲಿ ಮುಳುಗಿದ್ದ ವ್ಯಕ್ತಿಯು ಹೇಗೆ ಬದಲಾದರು ಎಂಬುದು ಇತರರಿಗೂ ಪ್ರೇರಣೆ ನೀಡಬಹುದು ಎಂಬುದೇ ಇದರ ಉದ್ದೇಶ. ಈ ಮಾಲಿಕೆಯನ್ನು ಅವರ ಆತ್ಮಕಥನದಿಂದ ಕೊಡುತ್ತಿದ್ದೇವೆ.

**ಭಾಗ–4**

### ಆರ್ಯ ಸಮಾಜದ ಸಂಪರ್ಕ

ನಾನು 14 ವರ್ಷದವನಾಗುವ ಹೊತ್ತಿಗೆ, ಆರ್ಯ ಸಮಾಜದ (ಹಿಂದು ಸುಧಾರಣಾ ಚಳುವಳಿಯ) ಸಂಪರ್ಕಕ್ಕೆ ಬಂದೆ. ಮಾಂಡಲೆಯ ನಮ್ಮ ಮನೆಯ ಹತ್ತಿರವೇ ಅವರು ಒಂದು ಹೊಸ ದೇವಸ್ಥಾನ ನಿರ್ಮಿಸಿದ್ದರು ಮತ್ತು ಅವರ ಪೂಜಾರಿಯಾದ ಪಂಡಿತ ಮಂಗಳದೇವಜಿ ಶಾಸ್ತ್ರಿಯವರು ಆಗ ತಾನೇ ಭಾರತದಿಂದ ಬಂದಿದ್ದರು. ಅವರಿಗಿನ್ನೂ 60 ವರ್ಷ ವಯಸ್ಸಾಗಿರಲಿಲ್ಲ. ಆದರೆ ಕೂದಲು ಸಂಪೂರ್ಣ ಬೆಳ್ಳಗಾಗಿದ್ದರಿಂದ ಮತ್ತು ಬಾಯಲ್ಲಿ ಹಲ್ಲುಗಳಿಲ್ಲದ್ದರಿಂದ ಅವರು ಬಹಳ ವಯಸ್ಸಾದವರಂತೆ ಕಾಣುತ್ತಿದ್ದರು. ಆದರೂ ಅವರ ಕಟ್ಟುಮಸ್ತಾದ ದೇಹ ಮತ್ತು ಹೊಳೆಯುವ ಮುಖ ನನ್ನನ್ನು ಅಗಾಧವಾಗಿ ಆಕರ್ಷಿಸಿದವು. ತಮ್ಮ ಕರುಣಾಮಯ ವ್ಯಕ್ತಿತ್ವ, ವೇದಶಾಸ್ತ್ರದಲ್ಲಿ ಆಳವಾದ ಜ್ಞಾನ ಮತ್ತು ಅದನ್ನು ಸರಳವಾದ ಭಾಷೆಯಲ್ಲಿ ವಿವರಿಸುವ ಶಕ್ತಿಯಿಂದ ಆರ್ಯ ಸಮಾಜದಲ್ಲಿ ನನಗೆ ಆಸಕ್ತಿಯುಂಟುಮಾಡಲು ಅವರು ಶಕ್ತರಾದರು. ನನ್ನ ಹದಿನೆಂಟನೇ ವಯಸ್ಸಿನಲ್ಲಿ ಜಪಾನಿಯರ ಯುದ್ಧ ಪ್ರಾರಂಭವಾದಾಗ ನಾನು ಮ್ಯಾನ್ಮಾರ್ ಬಿಡುವವರೆಗೂ ಈ ಆಸಕ್ತಿಯು ನನ್ನಲ್ಲಿ ಉಳಿದಿತ್ತು.

ಸ್ಥಳೀಯ ಯುವಕರನ್ನು 'ಆರ್ಯ ಬಾಲ ಸೇನೆ' ಎಂಬ ಹೆಸರಿನಲ್ಲಿ ಸಂಘಟಿಸಿ ಅವರಲ್ಲಿ ಹೊಸ ಅರಿವಿನ ಕಿಡಿ ಹೊತ್ತಿಸಿದರು, ಮತ್ತು ನನ್ನನ್ನು ಆ ಗುಂಪಿನ ಮುಖ್ಯಸ್ಥನನ್ನಾಗಿ ಮಾಡಿದರು. ಅವರ ಮಾರ್ಗದರ್ಶನದಲ್ಲಿ ಚರ್ಚಿಸಲು ಮತ್ತು ಯೋಗಾಸನಗಳನ್ನು, ಪ್ರಾಣಾಯಾಮ, ರಕ್ಷಣೆಯ ಕಲೆ ಮತ್ತು ಲಾಟಿ ಬೀಸುವುದನ್ನು ಕಲಿಯಲು ಪ್ರತಿ ಭಾನುವಾರ ನಾವು ಸೇರುತ್ತಿದ್ದೆವು. ಆರ್ಯ ಸಮಾಜದ ತತ್ವಗಳನ್ನು ಸಹ ಅವರು ಬಹಳ ಪ್ರೀತಿಯಿಂದ ವಿವರಿಸುತ್ತಿದ್ದರು. ಅವರ ಬೋಧಕರಾದ (ಆರ್ಯ ಸಮಾಜದ ಸಂಸ್ಥಾಪಕರು) ಮಹರ್ಷಿ ದಯಾನಂದ ಸರಸ್ವತಿಯವರ ಬುದ್ಧಿವಂತಿಕೆಯ, ಪ್ರಬುದ್ಧ ಚಿಂತನೆಗಳ ಗಾಢ ಪ್ರಭಾವಕ್ಕೊಳಗಾದೆ. ಆದರೆ ಎಂದೆಂದಿಗೂ ನಾನು ಅವರು ಘೋಷಿಸಿದ ಆಕಾರವಿಲ್ಲದ ಅಥವಾ ಅಮೂರ್ತ ದೇವರ ಆರಾಧಕನಾಗಲಿಲ್ಲ. ಆಕಾರವಿರುವ ಸ್ಪಷ್ಟ ದೇವರಿಗೆ ನನ್ನ ಅರ್ಪಣೆಯು ಆಳವಾಗಿ ಬೇರೂರಿತ್ತು ಮತ್ತು ಅದರಿಂದ ವಿಮುಖನಾಗುವುದು ನನಗೆ ಅಸಾಧ್ಯವಾಗಿತ್ತು. 'ಓ ದೇವರೇ, ನಿನ್ನ ಕರುಣಾಮಯಿ ಕೈಗಳನ್ನು ತೆರೆ, ನಾನು ನಿನ್ನಲ್ಲಿ ಶರಣಾಗುತ್ತೇನೆ' ಎಂಬ ಶ್ಲೋಕದ ಜೊತೆಗೆ 'ಜೈ ಜಗದೀಶ ಹರೇ' ಎಂದು ರಾಗವಾಗಿ ಹೇಳುತ್ತಾ ಅವರು ಮಂಗಳಾರತಿ ಮಾಡುತ್ತಿದ್ದಾಗ ನನಗನ್ನಿಸುತ್ತಿತ್ತು, " ಇದು ಆಕಾರವಿರುವ, ಮೂರ್ತ ದೇವರಿಗೆ ಮಾಡುವ ಪ್ರಾರ್ಥನೆಯಲ್ಲವೇ? ಇಲ್ಲಿ ಒಂದು ಕೋರಿಕೆಯಿದೆ, ನಿನ್ನ ಕೈಗಳನ್ನು ತೆರೆ ಎಂಬ ಪ್ರಾರ್ಥನೆಯಿದೆ, ಮತ್ತು ಇಲ್ಲಿ ಗುಣಗಳು ಮತ್ತು ಲಕ್ಷಣಗಳೂ ಇವೆ; ಇಲ್ಲವೆಂದರೆ, ರಕ್ಷಣೆ ಅರಸುವವರಿಗೆ ಕರುಣೆ ಯಾವ ರೀತಿಯಾಗಿ ಬರುತ್ತದೆ."

ಆದರೆ ಪಂಡಿತ ಶಾಸ್ತ್ರೀಜಿಯವರಿಗೆ ನಾನು ಈ ಪ್ರಶ್ನೆಗಳನ್ನು ಕೇಳುವ ಧೈರ್ಯ ಮಾಡಲಿಲ್ಲ. ಅಮೂರ್ತ ದೇವರ ಬಗ್ಗೆ ಅವಲೋಕನ ಮಾಡಬಹುದಾದರೂ, ಆಕಾರವಿರುವ ದೇವರುಗಳ ಬಗೆಗೆ ಮಾತ್ರ ಭಕ್ತಿಯಿರಲು ಸಾಧ್ಯ ಎಂದು ನಾನು ತೀರ್ಮಾನಿಸಿದೆ. ವಾರದ ಹವನ ಕಾರ್ಯಕ್ರಮದಲ್ಲಿ ಪ್ರಾರ್ಥನಾ ಮಂದಿರದಲ್ಲಿ ತೇಲಿ ಹೋಗುತ್ತಿದ್ದ ಪರಿಮಳವನ್ನು ನಾನು ಇಷ್ಟಪಡುತ್ತಿದ್ದೆನಾದರೂ, ಅದರ ಕಡೆ ನಾನು ಆಕರ್ಷಿತನಾಗಲಿಲ್ಲ. ಏಕೆಂದರೆ ಅವರ ವೇದ ಪಠನವು ನನಗೆ ಅರ್ಥವಾಗುತ್ತಿರಲಿಲ್ಲ. ಆದರೆ ಮುಕ್ತಾಯದ ಶಾಂತಿ ಪಠನವು ಚೆನ್ನಾಗಿ ಅರ್ಥವಾಗುತ್ತಿತ್ತು. ಅದು ಬಹಳ ಆಕರ್ಷಣೀಯವಾಗಿತ್ತು. ಕೆಲವು ವೇಳೆ ಮನೆಯಲ್ಲಿ ನಾನು ಇದನ್ನು ಪುನಃ

ಪತನ ಮಾಡುತ್ತಾ ನನ್ನ ಬಗ್ಗೆಯೇ ನಾನು ಹೆಮ್ಮೆಪಟ್ಟುಕೊಳ್ಳುತ್ತಿದ್ದೆ.

ಈ ಸಹಯೋಗದ ಒಂದು ದೊಡ್ಡ ಸಾಧನೆಯೆಂದರೆ, ಮೊದಲು ಪರೀಕ್ಷಿಸದೆ ಯಾವುದನ್ನು ಒಪ್ಪಿಕೊಳ್ಳಬಾರದು ಎಂಬುದನ್ನು ನಾನು ಕಲಿತೆ. 'ನಮ್ಮ ಧರ್ಮಗ್ರಂಥಗಳು ಹಾಗೆ ಹೇಳುತ್ತವೆ' ಎಂಬ ಅವಿವೇಕದ ತಾರ್ಕಿಕ ವಿವರಣೆಯೊಂದಿಗೆ ರಚಿತವಾದ ವಿಪುಲ ಧಾರ್ಮಿಕ ಸಾಹಿತ್ಯವನ್ನು ಕುರುಡಾಗಿ ಒಪ್ಪಿಕೊಳ್ಳಬಾರದು ಎಂಬುದನ್ನೂ ಅರ್ಥಮಾಡಿಕೊಂಡೆ. ಬಹು ವ್ಯಾಪಕವಾದ ಮೆಚ್ಚುಗೆ ಗಳಿಸುವ ಉದ್ದೇಶದಿಂದ ಅನೇಕ ಧರ್ಮಗ್ರಂಥಗಳನ್ನು ಕೃತ್ರಿಮ ಸ್ವಾರ್ಥದಿಂದ ರಚಿಸಿರುವುದು ದಿವ್ಯಜ್ಞಾನದಂತೆ ನನ್ನ ಅರಿವಿಗೆ ಬಂದಿತು. ನನ್ನ ಅರಿವಿಗೆ ಬಂದ ಇನ್ನೊಂದು ಅಚ್ಚರಿಯ ಸಂಗತಿ ಎಂದರೆ, ಆಗಿಂದಾಗ್ಗೆ ನಮ್ಮ ಧರ್ಮಗ್ರಂಥಗಳಲ್ಲಿ ಸತ್ಯಕ್ಕೆ ದೂರವಾದುದನ್ನು ಸೇರಿಸಿರುವುದು. ಆದ್ದರಿಂದ ಅದು ದಾರಿ ತಪ್ಪಿಸುತ್ತದೆ ಮತ್ತು ಒಪ್ಪಿಕೊಳ್ಳುವಂತಹುದಲ್ಲ.

ನನ್ನನ್ನು ಆಳವಾಗಿ ಪ್ರಭಾವಿಸಿದ ಮತ್ತೊಂದು ಅಂಶವೆಂದರೆ, ಸಮಾಜ ಸುಧಾರಣೆಯ ಬಗೆಗಿನ ಅವರ ಕಾಳಜಿ. 14 ರಿಂದ 18ರ ವಯಸ್ಸಿನವರೆಗೆ ಇತರೆ ಯುವಕರೊಡಗೂಡಿ ಬಾಲ್ಯ ವಿವಾಹಗಳನ್ನು ಮತ್ತು ವಯಸ್ಸಾದ ಗಂಡಸು ಮತ್ತು ಚಿಕ್ಕವಯಸ್ಸಿನ ವಧುವಿನ ಮಧ್ಯೆ ನಡೆಯುವ ವಿವಾಹಗಳನ್ನು ತಡೆಯುವ ವಿಫಲ ಪ್ರಯತ್ನಗಳನ್ನು ನಾನು ಮಾಡಿದೆ. ವಿಧವಾ ವಿವಾಹ ಮಾಡಿಸುವ ಒಂದು ವಿಫಲ ಪ್ರಯತ್ನವನ್ನೂ ಮಾಡಿದೆ. ಜೊತೆಗೆ, ಒಬ್ಬ ಅಸ್ಪೃಶ್ಯನನ್ನು ಶುದ್ಧಿಮಾಡುವ ಒಂದು ಪ್ರಯತ್ನಮಾಡಿದೆ. ಜನಿವಾರ ಹಾಕಿಕೊಳ್ಳಲು ಅವನಿಗೆ ಧೈರ್ಯ ತುಂಬಿದೆ. ಇದೂ ಫಲ ನೀಡಲಿಲ್ಲ. ಆದರೆ, ನನ್ನಲ್ಲಿ ಜಾಗೃತವಾದ ಸುಧಾರಣಾ ಮನೋಭಾವ ಮುಂಬರುವ ದಿನಗಳಲ್ಲಿ ನನಗೆ ಫಲ ನೀಡಿತು.

ಮಹರ್ಷಿ ದಯಾನಂದಜೀಯವರು ಬರೆದ 'ಸತ್ಯಾರ್ಥ ಪ್ರಕಾಶ' (ಸತ್ಯದ ಬೆಳಕು) ಎಂಬ ಮೂಲ ಗ್ರಂಥವನ್ನು ಓದಿದೆ. ಅದು ನನಗೆ ಹೊಸ ಆಯಾಮವನ್ನು ತೆರೆಯಿತು. ಆ ಎಳೆ ವಯಸ್ಸಿನಲ್ಲಿ ಮಸ್ತಕವನ್ನು ಚೆನ್ನಾಗಿ ಅರ್ಥಮಾಡಿಕೊಂಡೆ ಎಂದು ಹೇಳಲು ಸಾಧ್ಯವಿಲ್ಲ. ಆದರೆ ಬುದ್ಧರ ಬೋಧನೆಗಳಲ್ಲಿ ಅನೇಕ ನ್ಯೂನತೆಗಳಿವೆ ಎಂಬುದನ್ನು ಆ ಮಸ್ತಕದಲ್ಲಿ ಓದಿದೆ. ಒಂದು, ಆತ್ಮ ಮತ್ತು ದೇವರ ಅಸ್ತಿತ್ವವನ್ನು ತಿರಸ್ಕರಿಸಿ ಜನರನ್ನು ಬುದ್ಧ ನಾಸ್ತಿಕರನ್ನಾಗಿ ಮಾಡುತ್ತಾರೆ, ಎರಡು, ಅವರು ವೇದಗಳನ್ನು ಟೀಕಿಸಿದ್ದಾರೆ. ಅವರ ಮಾರ್ಗದಲ್ಲಿ ನಡೆಯುವವರು ಅಧೋಲೋಕಕ್ಕೆ ಹೋಗುವುದು ಇದೇ ಕಾರಣಕ್ಕಿರಬೇಕು ಎಂದು ಆಗ ನಾನು ತೀರ್ಮಾನಿಸಿದೆ. ನನ್ನ ಯುವ ಗ್ರಹಿಕೆಯನ್ನು ಮೀರಿದ ಬುದ್ಧರ ಬೋಧನೆಯಲ್ಲಿನ ಇತರೆ ಅನೇಕ ನ್ಯೂನತೆಗಳನ್ನು ಎತ್ತಿ ತೋರಿಸಲಾಗಿತ್ತು. ಆದರೆ ಬುದ್ಧರ ಬೋಧನೆಗಳು ದೋಷಪೂರಿತವಾಗಿವೆ ಎಂದು ಪರಿಗಣಿಸುವಷ್ಟನ್ನು ನಾನು ಈ ಮಸ್ತಕದಿಂದ ಅರ್ಥಮಾಡಿಕೊಂಡೆ. ಅವರ ಬೋಧನೆಗಳ ಬಗ್ಗೆ ಇದೇ ರೀತಿಯ ವಿವರಣೆಗಳನ್ನು ನನ್ನ ಅಕ್ಕನ ಗಂಡ ನೀಡಿದ್ದನ್ನೂ ನಾನು ಜ್ಞಾಪಿಸಿಕೊಂಡೆ. ಇದು ಅವುಗಳ ಬಗ್ಗೆ ನನ್ನ ಮನಸ್ಸನ್ನು ಇನ್ನೂ ಅಧಿಕ ಪ್ರತಿರೋಧ ಮಾಡುವಂತೆ ಮಾಡಿತು.

1942ರಲ್ಲಿ ಯುದ್ಧ ಪ್ರಾರಂಭವಾದಾಗ, ಬರ್ಮಾದಿಂದ ಹೊರಟು ನಾನು ಭಾರತ ತಲುಪಿದಾಗ, ಬೋಧನೆಗಳಲ್ಲಿ ಇನ್ನೂ ಹೆಚ್ಚಿನ ನ್ಯೂನತೆಗಳನ್ನು ನಾನು ಕೇಳಿದೆ. ಉದಾಹರಣೆಗೆ, ಮಾನವನ ಅಸ್ತಿತ್ವದಲ್ಲಿಯೇ ದುಃಖ ಇದೆ ಎಂದು ಅವರು ಪ್ರತಿಪಾದಿಸುತ್ತಾರೆ. ಇದು ಜನರಲ್ಲಿ ನಿರಾಶಾಭಾವನೆಯನ್ನು ಉತ್ಪತ್ತಿ ಮಾಡುತ್ತದೆ. ಅವರ ಬೋಧನೆಗಳ ಕೇಂದ್ರ ಬಿಂದುವು, ಕ್ಷುಲ್ಲಕವಾದ ಅಸ್ತಿತ್ವದ ಕ್ಷಣಿಕತೆ. ಅಂತಹ ಅನಿಶ್ಚಿತತೆಯ ಮಧ್ಯೆ, 'ಯಾವಾಗಲೂ ಇರುವ,' 'ಪರಿಪೂರ್ಣವಾದ' ಮತ್ತು 'ನಿರಂತರವಾದುದರ' ಬಗೆಗೆ ಪ್ರಸ್ತಾಪವೇ ಇಲ್ಲ. ಆದಕಾರಣ ನಿರಂತರವಾಗಿ ತಿರುಗುವ ಈ ಭವ ಚಕ್ರದಿಂದ ಹೊರಬರುವುದಕ್ಕೆ ಮಾರ್ಗದರ್ಶನವನ್ನೇ ನೀಡಿಲ್ಲ. ಮುಕ್ತಿಯನ್ನು ಅರಸುವವನಿಗೆ ಬೆಳಕಾಗುವ, ಅವನ ಉಜ್ವಲ ಭವಿಷ್ಯಕ್ಕೆ ಭರವಸೆ ಕೊಡುವಂತಹ ಸಕಾರಾತ್ಮಕ ಗುರಿಯ ಕಡೆಗೆ ಮಾರ್ಗದರ್ಶನವನ್ನು ನೀಡದ ಅವರ ಇಡೀ ಬೋಧನೆಯು ನಕಾರತ್ಮಕವಾಗಿದೆ. ಅವರು ಸಂನ್ಯಾಸಿಯಾಗಿದ್ದರು; ಹಾಗಾಗಿ ಅವರ ಬೋಧನೆಗಳು ಬಹುಶಃ ಸಂನ್ಯಾಸಿಗಳಿಗೆ ಪ್ರಯೋಜನಕಾರಿಯಾಗಿರಬಹುದು, ಆದರೆ ಗೃಹಸ್ಥರಿಗೆ ಉಪಯೋಗವಿಲ್ಲ ಎಂದು ನಾನು ತೀರ್ಮಾನಿಸಿದೆ.

ಬುದ್ಧರು ಕರುಣೆಯ ಸಾಗರವೇ ಆಗಿದ್ದರು ಎಂಬುದರಲ್ಲಿ ಅನುಮಾನವಿಲ್ಲ. ಹಾಗಾಗಿ ಅವರು ಸಂಪೂರ್ಣ ಅಹಿಂಸೆಯನ್ನು ಪ್ರೋತ್ಸಾಹಿಸಿದರು. ಆದರೆ ಇದು ದೇಶವನ್ನು ದುರ್ಬಲಗೊಳಿಸಿತು. ಅಶೋಕ ಚಕ್ರವರ್ತಿಯಂತಹ ಮಹಾರಥಿ ಕೂಡ ಅವರ ಬೋಧನೆಗಳನ್ನು ಪಡೆದು ತನ್ನ ಖಡ್ಗವನ್ನು ಬಿಸಾಡಿ, ಯುದ್ಧಕ್ಕೆ ಬೆನ್ನುಮಾಡಿದ. ಈ ಕ್ರಿಯೆಯು ಗಂಭೀರವಾದ ನಕಾರಾತ್ಮಕ ಮತ್ತು ದೀರ್ಘಕಾಲೀನ ಪರಿಣಾಮಗಳನ್ನುಂಟುಮಾಡಿತು. ದೇಶವನ್ನು ಶತ್ರುಗಳು ಪದೇ ಪದೇ ಮುತ್ತಿಗೆ ಹಾಕಿದರು. ಇದು ಪ್ರತಿ ಸಾರಿಯೂ ಹೊಸ ದಾಸ್ಯದ ಫಲ ನೀಡಿತು.

ಬದುಕಿನ ನಶ್ವರತೆಗೆ ಒತ್ತು ಕೊಡುವ ಬುದ್ಧರ ಬೋಧನೆಗಳು ಸುಂದರವಾದ ಕಾಮನ ಬಿಲ್ಲಿನಂತೆ ರಂಗುರಂಗಾದ ಜನರ ಜೀವನವನ್ನು ನಿರ್ಜೀವ ಮತ್ತು ನಿರರ್ಥಕಗೊಳಿಸಿದವು. ಎಲ್ಲವೂ ಅರ್ಥಹೀನ, ನಿರಾಶಾದಾಯಕ, ಎದುರು ನೋಡಲು ಏನೂ ಇಲ್ಲವೆಂಬಂತೆ ತೋರುತ್ತದೆ. ಇದು ದೇಶಕ್ಕೆ ಬಹಳ ಅನಾಹುತಕಾರಿ. ಇಂತಹ ಅನೇಕ ಕಥೆಗಳನ್ನು ಜುಗುಪ್ಸೆಯಿಂದ ನಾನು ಕೇಳಿದೆ. ಅವು ನನ್ನ ಮೇಲೆ ಗಾಢವಾದ ಪರಿಣಾಮ ಬೀರಿದವು.

ಬುದ್ಧರ ಬೋಧನೆಗಳಲ್ಲಿ ಒಳ್ಳೆಯ ಅನೇಕ ಅಂಶಗಳು ಇರಲೇಬೇಕು. ಆ ಕಾರಣದಿಂದಲೇ ಧರ್ಮವು ಜಗತ್ತಿನಾದ್ಯಂತ ವಿಶಾಲವಾಗಿ ಹರಡಿದೆ ಮತ್ತು ಜನಮನ್ನಣೆ ಗಳಿಸಿದೆ ಎಂದು ನಾನು ಯೋಚಿಸಿದೆ. ಆದರೆ ಪಾರಂಪರಿಕ ವೈದಿಕ ಸಂಪ್ರದಾಯದಲ್ಲಿನ ನನ್ನ ಅಚಲವಾದ ನಂಬಿಕೆಯ ಕಾರಣದಿಂದ, ಅವರ ಬೋಧನೆಗಳಲ್ಲಿರುವ ಒಳ್ಳೆಯದೆಲ್ಲವೂ ಈ ವೈದಿಕ ಸಂಪ್ರದಾಯದಿಂದ ತೆಗೆದುಕೊಂಡಿರುವುದು. ಜೊತೆಗೆ, ಸಂಸಾರ ತ್ಯಾಗ ಮತ್ತು ಅಹಿಂಸೆಯ ಬಗ್ಗೆ ಹೆಚ್ಚು ಮಹತ್ವ ಕೊಟ್ಟಿರುವುದು, ಮತ್ತು ನಮ್ಮ ಸಮಾಜದಲ್ಲಿ ಇತ್ತೀಚೆಗೆ ಹುಟ್ಟಿಕೊಂಡ ಕೆಲವು ನ್ಯೂನತೆಗಳನ್ನು ಸುಧಾರಿಸುವುದನ್ನು ಬಿಟ್ಟರೆ ಅವರ ಬೋಧನೆಗಳಲ್ಲಿ ಯಾವುದೂ ಹೊಸದಿಲ್ಲ ಎಂದು ತೀರ್ಮಾನಿಸಿದೆ.

ಚಿಕ್ಕ ವಯಸ್ಸಿನಲ್ಲಿಯೇ ನನಗೆ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ರಾಜಕೀಯದಂತಹ ಅನೇಕ ಕ್ಷೇತ್ರಗಳಲ್ಲಿ ಅದ್ಭುತವಾದ ಯಶಸ್ಸು ಲಭಿಸಿತು. ನಾನು ರಂಗೂನಿನಲ್ಲಿದ್ದೆ. 25 ವರ್ಷದವನಿದ್ದಾಗಲೇ ಅನೇಕ ಮುಂಚೂಣಿ ನಾಯಕರುಗಳ ಸಂಪರ್ಕಕ್ಕೆ ಬಂದೆ ಮತ್ತು ಈ ಅನೇಕ ಒಡನಾಟಗಳು ಆತ್ಮೀಯ ಸ್ನೇಹ ಸಂಬಂಧಗಳಾಗಿ ಪರಿವರ್ತನೆಗೊಂಡವು. ಆದರೂ ಇನ್ನೂ ಪೂರ್ಣ ಪ್ರಬುದ್ಧತೆಯಿಲ್ಲದ್ದರಿಂದ, ನನ್ನ ಅಭಿಪ್ರಾಯಗಳನ್ನು ನೇರವಾಗಿ ಹೇಳುವ ಸ್ವಾತಂತ್ರ್ಯವನ್ನು ಕೆಲವು ವೇಳೆ ತೆಗೆದುಕೊಳ್ಳುತ್ತಿದೆ. ನಯವಾಗಿಯೇ ಹೇಳಿದರೂ, ಈ ಅಭಿಪ್ರಾಯಗಳು ಕೆಲವು ವೇಳೆ ನನ್ನ ಒಡನಾಡಿಗಳ ಮನಸ್ಸನ್ನು ನೋಯಿಸುತ್ತಿದ್ದವು. ಆಗ, ವೈದಿಕ ಸಂಪ್ರದಾಯದ ಗಹನತೆಯನ್ನು ಅರ್ಥಮಾಡಿಕೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲ, ಅದಕ್ಕಾಗಿಯೇ ಅವರ ಭಾವನೆಗಳಿಗೆ ಧಕ್ಕೆಯಾಗುತ್ತಿದೆ, ಎಂತಹ ದುರದೃಷ್ಟ ಎಂದು ಯೋಚಿಸುತ್ತಾ ನಾನು ಅವರ ವ್ಯಥೆಯನ್ನು ಹೋಗಲಾಡಿಸುತ್ತಿದ್ದೆ. ಜಗತ್ತಿನ ಜ್ಞಾನ ಮತ್ತು ವಿವೇಕ ವೇದಗಳಲ್ಲಿದೆ; ಯಾರೇ, ಯಾವಾಗಲೇ, ಎಲ್ಲೇ ವಿವೇಕದ ಮಾತುಗಳನ್ನಾಡಿದರೆ, ಅವುಗಳ ಮೂಲವನ್ನು ವೇದಗಳಲ್ಲಿ ಕಾಣಬಹುದು ಎನ್ನುವುದು ನನ್ನ ನಂಬಿಕೆಯಾಗಿತ್ತು. ಆದರೆ ನಿಸ್ಸಂದೇಹವಾಗಿ ಅಲ್ಲಿಯವರೆಗೂ ನಾನು ವೇದಗಳ ಒಂದು ಪುಟವನ್ನೂ ಓದಿರಲಿಲ್ಲ. ನಾನು ನಂಬಿದ್ದೆಲ್ಲವೂ ಬೇರೆಯವರ ಮಾತುಗಳನ್ನು ಆಧರಿಸಿದ್ದು.

'ಹಿಂದೂ ಧರ್ಮದ ಸಾರತತ್ವ' ಎಂಬ ವಿಷಯದ ಮೇಲೆ ನಾನು ಮಾತನಾಡುತ್ತೇನೆಂದು ಸ್ಥಳೀಯ ಇಂಗ್ಲಿಷ್ ವೃತ್ತಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಸಾಹಿತ್ಯ, ಸಂಸ್ಕೃತಿ ಅಥವಾ ಧರ್ಮದ ವಿಷಯಗಳ ಮೇಲಿನ ನನ್ನ ಭಾಷಣಗಳು ಆಗಿನ ಕಾಲದಲ್ಲಿ ಯಾವಾಗಲೂ ಹಿಂದಿಯಲ್ಲಿರುತ್ತಿದ್ದವು. ನನ್ನ ಇಂಗ್ಲಿಷ್ ಭಾಷಾ ಜ್ಞಾನವು ಸೀಮಿತವಾಗಿದ್ದುದರಿಂದ ನನ್ನ ಅನೇಕ ಬರ್ಮೀಯ ಗೆಳೆಯರು ನನ್ನ (ಹಿಂದಿ) ಭಾಷಣಗಳಿಂದ ಪ್ರಯೋಜನ ಪಡೆಯಲು ಸಾಧ್ಯವಿರಲಿಲ್ಲ. ಆದರೆ, ಈ ಭಾಷಣದ ಪ್ರಕಟಣೆಯು ತಪ್ಪಾಗಿ ಇಂಗ್ಲಿಷ್ ವೃತ್ತ ಪತ್ರಿಕೆಯಲ್ಲಿ ಬಂದದ್ದರಿಂದ, ನಾನು ಇಂಗ್ಲಿಷ್‌ನಲ್ಲಿ ಮಾತನಾಡುತ್ತೇನೆಂದು ಊಹಿಸಿಕೊಂಡು

ಮೂರ್ನಾಲ್ಕು ಜನ ನನ್ನ ಆತ್ಮೀಯ ಬರ್ಮೀಯ ಗೆಳೆಯರು ನನ್ನ ಉಪನ್ಯಾಸ ಕೇಳಲು ಬಂದಿದ್ದರು. ನಾನು ಹಿಂದಿಯಲ್ಲಿ ಮಾತನಾಡಿದೆ. ಅವರಿಗೆ ಬಹಳ ನಿರಾಶೆಯಾಯಿತು. ಆದ್ದರಿಂದ ಭಾಷಣ ಮುಗಿದ ಮೇಲೆ ನಾನು ಅವರನ್ನು ಮನೆಗೆ ಕರೆದುಕೊಂಡು ಹೋಗಿ ನನ್ನ ಭಾಷಣದ ಸಾರಾಂಶವನ್ನು ನೀಡಿದೆ.

ಭಗವದ್ಗೀತೆಯು ಹಿಂದುಗಳ ಅತ್ಯಂತ ಸಾರವತ್ತಾದ ಪುಸ್ತಕ ಮತ್ತು ಅದರ ತಿರುಳು ಸಮತೆ, ಸಮ ಚಿತ್ತತೆ ಎಂದು ವಿವರಿಸಿದೆ. ಅವರಿಗೊಂದು ಸಂಕ್ಷಿಪ್ತ ವಿವರಣೆ ಕೊಟ್ಟೆ. ನೀವು ಏನನ್ನು ವಿವರಿಸುತ್ತಿದ್ದೀರೊ ಅದು ಬುದ್ಧರು ವಿವರಿಸಿದ ಒಬ್ಬ ಅರಹಂತನ ಗುಣಗಳು ಎಂದು ನನ್ನ ಸ್ನೇಹಿತ ಯು ತಾ ಮ್ಯಾ ಉತ್ತರಿಸಿದ. ನಾನು ಅಹಂಕಾರದಿಂದ ಮಾತಾಡಿದೆ. ಬುದ್ಧರ ಮಾತುಗಳನ್ನು ವೇದಗಳಿಂದ ಅಥವಾ ಗೀತೆಯಿಂದ ತೆಗೆದುಕೊಳ್ಳಲಾಗಿದೆ ಎಂದು ನಾನು ಅವರಿಗೆ ನಿಸ್ಸಂದೇಹವಾಗಿ ಹೇಳಿದೆ. ಹಾಗಾಗಿ ಅರಹಂತರ ಗುಣಗಳೆಂದು ಯಾವುದನ್ನು ಬುದ್ಧ ಹೇಳಿದರೋ ಅವುಗಳಿಗೂ, ಗೀತೆಯಲ್ಲಿ ಹೇಳಿರುವ ಸಮಚಿತ್ತತೆಯ ಗುಣಗಳಿಗೂ ತಾಳೆಯಾಗುತ್ತಿರುವುದು ಆಶ್ಚರ್ಯವೇನಲ್ಲ ಎಂದೆ.

ಯು ತಾ ಮ್ಯಾ ಇದನ್ನು ಇಷ್ಟಪಡಲಿಲ್ಲ. ಅವರು ಪಾಲಿ, ಸಂಸ್ಕೃತ, ಹಿಂದಿ, ಇಂಗ್ಲಿಷ್ ಮತ್ತು ಬರ್ಮೀಯ ಭಾಷೆಗಳನ್ನು ತಿಳಿದಿದ್ದ, ಒಳ್ಳೆಯ ಹೆಸರು ಮಾಡಿದ್ದ ವಿದ್ವಾಂಸರಾಗಿದ್ದರು. ಭಾರತದ ಸುಪ್ರಸಿದ್ಧ ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿದ್ದರು ಮತ್ತು ಬರ್ಮಾ ಸರ್ಕಾರದಲ್ಲಿ 'ಸಾಂಸ್ಕೃತಿಕ ವ್ಯವಹಾರಗಳ' ಮುಖ್ಯಸ್ಥರಾಗಿದ್ದರು. 'ನನ್ನ ಹೇಳಿಕೆ ತಪ್ಪು ಮತ್ತು ನಾನು ಬುದ್ಧರ ಬೋಧನೆಗಳನ್ನು ಮತ್ತು ನಮ್ಮ ಸಂಪ್ರದಾಯದ ಹಿಂದು ಧರ್ಮಗ್ರಂಥಗಳನ್ನು ಪೂರ್ಣ ವಸ್ತುನಿಷ್ಠವಾಗಿ ಅಧ್ಯಯನ ಮಾಡಿದರೆ ನನ್ನ ಅಭಿಪ್ರಾಯಗಳು ಎಷ್ಟು ತಪ್ಪಿವೆ ಎಂಬುದನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ' ಎಂದು ಅವರು ತಣ್ಣಗೆ ನನಗೆ ಹೇಳಿದರು. ನಾವು ಆತ್ಮೀಯ ಗೆಳೆಯರಾಗಿದ್ದೆವು. ಆದ್ದರಿಂದ ಇಂತಹ ಅಭಿಪ್ರಾಯ ಭೇದಗಳು ನಮ್ಮ ಗೆಳೆತನಕ್ಕೆ ಅಡ್ಡಿಯಾಗಲಿಲ್ಲ. ಆದಾಗ್ಯೂ, ನನ್ನ ಅಭಿಪ್ರಾಯದಲ್ಲಿಯೇ ನಾನು ಗಟ್ಟಿಯಾಗಿ ಮುಂದುವರಿದೆ.

ಪೂಜ್ಯ ಭದಂತೆ ಆನಂದ ಕೌಶಲ್ಯಾನಂದಜಿ ಆಗಿಂದಾಗ್ಗೆ ಬರ್ಮಾ ದೇಶಕ್ಕೆ ಭೇಟಿಕೊಡುತ್ತಿದ್ದರು ಮತ್ತು ನಮ್ಮ ಮನೆಯಲ್ಲಿ ಇಳಿದುಕೊಳ್ಳುತ್ತಿದ್ದರು. ನಮ್ಮ ಹಿಂದಿ ಭಾಷಾ ಪ್ರಚಾರದ ಕೆಲಸದಲ್ಲಿ ನಾವು ಅವರಿಂದ ಬಹಳ ಸಹಾಯ ಪಡೆದಿದ್ದೆವು. ಅದಕ್ಕಾಗಿ ನಾನು ಅವರಿಗೆ ಯಾವಾಗಲು ಕೃತಜ್ಞನಾಗಿದ್ದೇನೆ. ಒಬ್ಬ ನಿಷ್ಠಾವಂತ ಗೃಹಸ್ಥನಾಗಿ ಅತಿಥಿಗಳ ಬಗೆಗಿನ ನನ್ನ ಕರ್ತವ್ಯಗಳ ಬಗ್ಗೆ ನನಗೆ ಚೆನ್ನಾಗಿ ಅರಿವಿತ್ತು. ಆದರೆ ಬುದ್ಧರ ಬೋಧನೆಗಳ ಬಗ್ಗೆ ಅವರಿಂದ ಬರುವ ಯಾವುದೇ ವಿವರಣೆಗಳು ನನ್ನನ್ನು ಕಸಿವಿಸಿಗೊಳಿಸುತ್ತಿದ್ದವು. ಯಾವುದೇ ಅಹಿತಕರ ಭಾವನೆ ಉಂಟುಮಾಡದಷ್ಟು ಎಚ್ಚರವಹಿಸುತ್ತಿದ್ದ ಅವರು, ಲಘು ಹಾಸ್ಯದೊಂದಿಗೆ ವಿಷಯ ಬದಲಾಯಿಸುತ್ತಿದ್ದರು.

ನನ್ನ ಮನೆಯಲ್ಲಿ ಒಂದು ಸಾರಿ ಹಿಂದಿ ಪ್ರಚಾರದ ಕೆಲಸದ ಬಗ್ಗೆ ಒಂದು ಚರ್ಚೆಯಿತ್ತು. ಅರಹಂತರ ಗುಣಗಳನ್ನು ಗೀತೆಯಿಂದ ತೆಗೆದುಕೊಳ್ಳಲಾಗಿದೆ ಎಂಬ ನನ್ನ ವಿವರಣೆಯಿಂದ ಸ್ವಲ್ಪ ಅಹಿತಕರ ಭಾವನೆ ಮೂಡಿದ್ದ ನನ್ನ ಬರ್ಮೀಯ ಗೆಳೆಯ ಯು ತಾ ಮ್ಯಾ ಸಹ ಇದ್ದರು. ಅವರು ಇದ್ದಕ್ಕಿದ್ದಂತೆ ಈ ವಿಷಯವನ್ನು ಪ್ರಸ್ತಾಪಿಸಿದರು. ಇದಕ್ಕೆ ಆನಂದಿಜಿಯವರು, " ಅವರು ಸರಿಯಾಗಿ ಹೇಳಿದ್ದಾರೆ, ಅದಕ್ಕಿಂತ ಹೆಚ್ಚಿನದೆಂದರೆ, ಬುದ್ಧನ ಕಾಲಾನಂತರ ಗೀತೆಯ ರಚನೆಯಾಗಿದೆ ಮತ್ತು ಅದು ಬುದ್ಧರ ಮಾತು ಮತ್ತು ಬೋಧನೆಗಳಿಂದ ತುಂಬಿದೆ" ಎಂದು ಅಭಿಪ್ರಾಯಪಟ್ಟರು. ಆನಂದಜೀಯವರು ಬುದ್ಧರ ಬೋಧನೆಯ ಗಾಢ ಪ್ರಭಾವಕ್ಕೊಳಗಾಗಿದ್ದರು ಎಂದು ಹೇಳುವ ಅವಶ್ಯಕತೆಯಿಲ್ಲ.

ಈ ಮಾತುಗಳು ನನ್ನ ಮೇಲೆ ಮಾಡಿದ ಪರಿಣಾಮವನ್ನು ವರ್ಣಿಸಲು ಸಾಧ್ಯವಿಲ್ಲ. ಅದಕ್ಕಿಂತಲೂ ಮಿಗಿಲಾದದ್ದು, ಬೌದ್ಧ ಧರ್ಮವು ವೈದಿಕ ಧರ್ಮದ ಕುಡಿ ಎಂಬ ನಂಬಿಕೆ ಸಂಪೂರ್ಣ ತಪ್ಪು ಎಂದು ಅವರು ಮುಂದುವರಿದು ಹೇಳಿದ್ದು. ಅವರ ಪ್ರಕಾರ ಇಂದಿನ ಹಿಂದು ಧರ್ಮವು ಬೌದ್ಧ ಧರ್ಮದ ಕುಡಿ. ಈ ಮಾತುಗಳಿಗೆ ಯು ತಾ ಮ್ಯಾ ಅವರು ತಲೆ ಅಲ್ಲಾಡಿಸಿ ಒಪ್ಪಿಗೆ ಸೂಚಿಸುತ್ತಿದ್ದರು. ನಾನು ಮೌನವಹಿಸಿದೆ. ಈ ಹೇಳಿಕೆಯು ನನ್ನನ್ನು ಗಾಢವಾಗಿ ಬಾಧಿಸಿದ್ದನ್ನು ಅವರು ಅರ್ಥಮಾಡಿಕೊಂಡರು. ಆ ಸಮಯದಲ್ಲಿ ಬೌದ್ಧ ಧರ್ಮದ ನನ್ನ ಸಾಂಪ್ರದಾಯಿಕ ತಿಳುವಳಿಕೆಯನ್ನಾಧರಿಸಿ, ಅವರ ಮಾತುಗಳು ಸತ್ಯಕ್ಕೆ ಎಷ್ಟೊಂದು ದೂರವಾಗಿವೆ ಎಂದು ಚಿಂತಿಸಿದೆ.

ಕುರುಕ್ಷೇತ್ರದ ಯುದ್ಧಭೂಮಿಯಲ್ಲಿ 5000 ವರ್ಷಗಳ ಹಿಂದೆ ಶ್ರೀ ಕೃಷ್ಣ ಪರಮಾತ್ಮನು ಅರ್ಜುನನಿಗೆ ಪ್ರೋತ್ಸಾಹದಾಯಕ ಮಾತುಗಳಾಗಿ ನೀಡಿದ ಗೀತೆಯು, 2500 ವರ್ಷಗಳ ಹಿಂದಿನ ಬುದ್ಧರ ಬೋಧನೆಗಳ ಪ್ರಭಾವಕ್ಕೆ ಒಳಗಾಗಲು ಹೇಗೆ ಸಾಧ್ಯ? ಈ ಸರಳ ತರ್ಕವು, ಬೌದ್ಧ ಧರ್ಮದ ಪ್ರಭಾವಕ್ಕೊಳಗಾದ ಅವರ ತಿಳುವಳಿಕೆಯನ್ನು ಮೀರಿದ್ದಾಗಿತ್ತು. ಅವರ ಮಾತುಗಳಲ್ಲಿ ಸತ್ಯಾಂಶವಿರಲಿಲ್ಲ. ಏಕೆಂದರೆ, ಬುದ್ಧರು ಪುರಾತನ ಗೀತೆಯ ಬೋಧನೆಗಳ ಪ್ರಭಾವಕ್ಕೊಳಗಾಗಿದ್ದರು ಎಂಬ ಸತ್ಯವು ಮುಂದುವರಿಯುತ್ತದೆ. ಇದಕ್ಕಿಂತಲೂ ದೊಡ್ಡ ಸುಳ್ಳು ಎಂದು ನನಗೆನಿಸಿದ್ದು, ಹಿಂದು ಧರ್ಮವು ಬೌದ್ಧ ಧರ್ಮದ ಶಿಶು ಎಂಬುದು. ಆದರೆ ಮೌನವಾಗಿರುವುದೇ ಬುದ್ಧಿವಂತಿಕೆ ಎನಿಸಿತು.

ಬೌದ್ಧ ಧರ್ಮದ ಮೇಲೆ ಸ್ವಲ್ಪ ಅಥವಾ ಯಾವುದೇ ಚರ್ಚೆಯಿಲ್ಲದೆ, ಗೌರವಾನ್ವಿತ ಆನಂದಜೀಯವರೊಟ್ಟಿಗಿನ ನನ್ನ ಒಡನಾಟ ಯಾವಾಗಲೂ ಆತ್ಮೀಯವಾಗಿತ್ತು. ಒಂದು ಸಾರಿ ಅವರ ಬರ್ಮಾದ ವಾಸ ಮುಗಿದ ಮೇಲೆ, ನಾನು ಅವರನ್ನು ವಿಮಾನ ನಿಲ್ದಾಣಕ್ಕೆ ಕರೆದುಕೊಂಡು ಹೋದೆ. ಅವರ ವಿಮಾನ ಹೊರಡುವುದು ಎರಡು ಗಂಟೆ ತಡವಾಗಿತ್ತು. ನಾವು ಕಾಯುತ್ತಿರಬೇಕಾದರೆ, ಬುದ್ಧರ ಜೀವನದ ಕೊನೆಯ ಕ್ಷಣಗಳ ಬಗ್ಗೆ ಮಾತನಾಡಿದರು. ಒಬ್ಬ ಉಪಾಸಕ ಆ ಸಮಯದಲ್ಲಿ ಅವರಿಂದ ಧರ್ಮ ಬೋಧನೆ ಅರಸಿ ಬಂದ. ಇದು ಪರಿನಿಬ್ಬಾಣದ ಸಮಯವಾಗಿರುವುದರಿಂದ ಅವರಿಗೆ ವಿಶ್ರಾಂತಿ ಪಡೆಯಲು ಬಿಡಬೇಕು ಎಂದು ವಿವರಿಸುತ್ತಾ, ಬುದ್ಧರ ಸಹಾಯಕರಾಗಿದ್ದ ಭಿಕ್ಖು ಆನಂದ ಅವನನ್ನು ತಡೆದರು. ಆದರೆ ಪಟ್ಟು ಬಿಡದ ಈ ವ್ಯಕ್ತಿಯನ್ನು ನಿಲ್ಲಿಸುವುದು ಕಷ್ಟವಾಯಿತು. " ಆನಂದ, ಅವನನ್ನು ಬರಲು ಬಿಡು; ಅವನು ಯೋಗ್ಯನಾದ ಅನ್ವೇಷಕ ಮತ್ತು ನನ್ನ ಬೋಧನೆಗಳಿಂದ ಪ್ರಯೋಜನ ಪಡೆಯುತ್ತಾನೆ," ಎಂದು ಹೇಳುವಾಗ ಬುದ್ಧರ ಅಂತ್ಯದ ಸಮಯ ಬಹಳ ಹತ್ತಿರವಿತ್ತು; ಆದರೆ ನಂದುತ್ತಿದ್ದ ಜ್ಯೋತಿಯು, ಬುದ್ಧರಿಂದ ಹೊರಹೊಮ್ಮುತ್ತಿದ್ದ ಕರುಣೆಯ ಅಲೆಗಳಿಂದ ಮತ್ತೊಮ್ಮೆ ಪ್ರಕಾಶಮಾನವಾಗಿ ಉರಿಯಿತು. ಅವರ ಕೊನೆಯ ಕ್ಷಣಗಳಲ್ಲಿ, ಮುಕ್ತಿಯ ಮಾರ್ಗವನ್ನು ಮತ್ತೊಮ್ಮೆ ವಿವರಿಸುತ್ತಾ, ಅವರು ಧರ್ಮ ಬೋಧನೆ ಮಾಡಿದರು. ಬುದ್ಧ ಅಂತಹವರಾಗಿದ್ದರು.

ನಾನು ಯಾವಾಗಲೂ ಸೂಕ್ಷ್ಮಮತಿಯಾಗಿದ್ದೆ, ಬಹುಶಃ ಭಾವ ಜೀವಿಯೂ ಆಗಿದ್ದೆ. ಆದರೆ, ಖಂಡಿತವಾಗಿಯೂ ಬುದ್ಧರ ಬಗ್ಗೆ ನನಗೆ ಅಗಾಧವಾದ ಗೌರವವಿತ್ತು. ಆನಂದಜೀಯರ ಮಾತುಗಳನ್ನು ಕೇಳುತ್ತಿರಬೇಕಾದರೆ, ನನ್ನ ಕಣ್ಣಿಂದ ನೀರು ಹರಿಯುತ್ತಿತ್ತು. ಬುದ್ಧರ ಅಪರಿಮಿತ ಕರುಣೆಯ ಬಗ್ಗೆ ನನಗೆ ಯಾವುದೇ ಅನುಮಾನಗಳಿರಲಿಲ್ಲ.

ನನ್ನ ಹೃದಯ ಕರಗಿದ್ದನ್ನು ಕಂಡು, ಅವರು ಧಮ್ಮಪದ ಪುಸ್ತಕದ ಒಂದು ಪ್ರತಿಯನ್ನು ನನಗೆ ಕೊಟ್ಟರು. ಬಹಳ ವರ್ಷಗಳ ಕಾಲ ಅದು ನನ್ನ ಮೇಜಿನ ಮೇಲೆಯೇ ಇತ್ತು. ಬುದ್ಧರ ಬೋಧನೆಯಲ್ಲಿ ಒಂದು ಗುರುತರವಾದ ತಪ್ಪಿದೆ, ಅದು ನನ್ನನ್ನು ತಪ್ಪು ದಾರಿಯಲ್ಲಿ ಮುನ್ನಡೆಸಬಹುದು ಎಂದು ಬಲವಾಗಿ ನಂಬಿದ್ದರಿಂದ, ಈ ಪುಸ್ತಕದ ಒಂದು ಪುಟವನ್ನೂ ನಾನು ಓದಲಿಲ್ಲ. ಇಲ್ಲವಾದರೆ, ಧಾರ್ಮಿಕ ಮುಖಂಡರಲ್ಲಿ ದಿಗ್ಗಜರಾದ ಶ್ರೀ ಶಂಕರಾಚಾರ್ಯರು ಅವರನ್ನು ಭಾರತದಿಂದ ಓಡಿಸುತ್ತಿದ್ದರೇ? ಬುದ್ಧರು ಗೌರವಕ್ಕೆ ಬಹಳ ಅರ್ಹರಾದವರು. ಆದರೆ ಅವರ ಬೋಧನೆಗಳನ್ನು ಸ್ವೀಕರಿಸಬಾರದು ಎಂಬ ನನ್ನ ಬಲವಾದ ನಂಬಿಕೆಯನ್ನು ಯಾವುದೂ ಅಲ್ಲಾಡಿಸಲು ಸಾಧ್ಯವಿರಲಿಲ್ಲ. ವ್ಯಕ್ತಿಯ ಬಾಲ್ಯದ ನಂಬಿಕೆಗಳು ಮತ್ತು ಪೂರ್ವಗ್ರಹಗಳನ್ನು ಕೈಬಿಡುವುದು ಬಹಳ ಕಷ್ಟ. (ಗೋಯಂಕಾಜಿಯವರ ಆತ್ಮಕಥೆಯಿಂದ)

.......ಮುಂದುವರಿಯುವುದು

**RNI. No. : KARKAN/2015/68727. Postal Regn. No.: RNP/KA/BGS/2253/2020-22**
**Published On 10th & Posted On 20th of every Month. Posted At : Bengaluru PSO, B'luru 26. Price(Annual)Rs.30.**

**ಧಮ್ಮ ಪಫುಲ್ಲಾ, ಬೆಂಗಳೂರು**

**10 ದಿನದ ಶಿಬಿರಗಳು:** 2020: ಜನವರಿ 1–12, 16–27, ಫೆಬ್ರವರಿ 5–16, 17 1 ಮಾರ್ಚ್, 4–15. ಏಪ್ರಿಲ್ 8–19, 22–3 ಮೇ 20–31. ಜೂನ್ 3–14, 17–28. ಜುಲೈ 1–12, 15–26, 29–9 ಆಗಸ್ಟ್. ಸೆಪ್ಟಂಬರ್ 2–13, 18–29. ಅಕ್ಟೋಬರ್ 7–18, 21–1 ನವೆಂಬರ್. ಡಿಸೆಂಬರ್ 11–22. **ಸತಿಪಟ್ಠಾನ ಶಿಬಿರಗಳು:** ಮಾರ್ಚ್ 28–5 ಏಪ್ರಿಲ್, ಆಗಸ್ಟ್ 12–20, ನವೆಂಬರ್ 4–12,. **3ದಿನದ ಶಿಬಿರಗಳು: ಜನವರಿ 30 – 2 ಫೆಬ್ರವರಿ, ಮಾರ್ಚ್ 19–22, ಆಗಸ್ಟ್ 27–30. ಒಂದು ದಿನದ ಶಿಬಿರ:** ಪ್ರತಿ ಭಾನುವಾರ ಬೆಳಿಗ್ಗೆ 11ರಿಂದ ಸಾಯಂಕಾಲ 4 ಗಂಟೆ. **ಮಕ್ಕಳ ಶಿಬಿರ:** ಪ್ರತಿ ತಿಂಗಳು ಯಾವುದಾದರೂ ಒಂದು ಭಾನುವಾರ. **ವಿಳಾಸ:** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಹತ್ತಿರ ಇಳಿದು ಅದರ ಎದುರು ರಸ್ತೆಯಲ್ಲಿ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ (ಕೆಂಪೇಗೌಡ) ಬಸ್ ನಿಲ್ದಾಣದಿಂದ ನಗರ ಸಾರಿಗೆ ಬಸ್ ಸಂಖ್ಯೆ: 256, 258, 258ಸಿ. ಮೊಬೈಲ್: 7829912733, 8861644284, 9972588377,

ಇ–ಮೇಲ್:info@paphulla.dhamma.org;

website: www.dhamma.org. **7406934095**

**ವಿಪಶ್ಯನ ಧ್ಯಾನ ಕೇಂದ್ರ, ದಾವಣಗೆರೆ**

**10 ದಿನದ ಶಿಬಿರಗಳು :** 2020 ಜನವರಿ 1 ರಿಂದ 12, ಜನವರಿ 29–ಫೆಬ್ರವರಿ 9, ಮಾರ್ಚ್ 4–15, ಏಪ್ರಿಲ್ 1–12. ಪ್ರತಿ ತಿಂಗಳು ಒಂದು ಶಿಬಿರ ನಡೆಸಲಾಗುವುದು. ಮಾಹಿತಿಗಾಗಿ ಕೆಳಗಿನ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಿ. **ಆನ್‌ಲೈನ್ ರಿಜಿಸ್ಟ್ರೇಷನ್:https://www.dha mma.org/en/schedules/ noncenter/davanagere.in ಒಂದು ದಿನದ ಶಿಬಿರ :** ಪ್ರತಿ ಭಾನುವಾರ ಬೆಳಿಗ್ಗೆ 10 ರಿಂದ 1.30 ರವರೆಗೆ. (ಹತ್ತು ದಿನದ ಶಿಬಿರ ನಡೆಯುವಾಗ ಬಿಟ್ಟು) **ವಿಳಾಸ :** ವಿಪಶ್ಯನ ಧ್ಯಾನ ಮತ್ತು ಸಂಶೋಧನಾ ಕೇಂದ್ರ, ಬೆಳಕು ಸಂಸ್ಥೆ ಆವರಣ, ಆಂಜನೇಯ ಮಿಲ್ ಹತ್ತಿರ, ದಾವಣಗೆರೆ ವಿಶ್ವವಿದ್ಯಾನಿಲಯ ರಸ್ತೆ, ದಾವಣಗೆರೆ. ನಗರ ಸಾರಿಗೆ ಬಸ್ ಸಂಖ್ಯೆ 101 (ವಿದ್ಯಾನಗರದಿಂದ ದಾವಣಗೆರೆ ವಿಶ್ವವಿದ್ಯಾನಿಲಯ). ಆಂಜನೇಯ ಮಿಲ್ ನಿಲ್ದಾಣದಲ್ಲಿ ಇಳಿದು ಬಸ್ ಹೋದ ದಾರಿಯಲ್ಲಿ ಸ್ವಲ್ಪ ಮುಂದೆ ಸಾಗಿದರೆ, ವಿಪಶ್ಯನ ಧ್ಯಾನ ಕೇಂದ್ರದ ಬೋರ್ಡ್ ಕಾಣಿಸುತ್ತದೆ. ಅಲ್ಲಿಂದ ಒಂದು ಕಿ.ಮೀ. ದೂರವಿದೆ. ಬೆಂಗಳೂರಿನಿಂದ ಬಸ್‌ನಲ್ಲಿ ಪ್ರಯಾಣಿಸುವವರು ಬಾಡಾ ಕ್ರಾಸ್‌ನಲ್ಲಿ ಇಳಿದು ನಗರ ಸಾರಿಗೆ ಬಸ್ ಹತ್ತಿ ಆಂಜನೇಯ ಮಿಲ್ ಹತ್ತಿರ ಇಳಿದು ಹೋಗಬಹುದು. ಬಾಡಾ ಕ್ರಾಸ್‌ನಿಂದ 2ಕಿ.ಮೀ ದೂರವಿದೆ. **ಸಂಪರ್ಕ ಸಂಖ್ಯೆಗಳು :** 9448588789, 9844245111, 9986962762, 8618103741, 9008733008, 8762086089.

**ಧಮ್ಮ ಸುಖಾಲಯ, ವಿಪಶ್ಯನ ಅಂತರರಾಷ್ಟ್ರೀಯ ಧ್ಯಾನ ಕೇಂದ್ರ, ಅರೇಹಳ್ಳಿ, ಬೆಂಗಳೂರು.** ಒಂದು ದಿನದ ಧ್ಯಾನಶಿಬಿರ ಪ್ರತಿ ಭಾನುವಾರ ಬೆಳಗ್ಗೆ 10 ರಿಂದ ಸಾಯಂಕಾಲ 4ರ ವರೆಗೆ ಮಕ್ಕಳ ಶಿಬಿರ ಪ್ರತಿ ತಿಂಗಳು ಎರಡನೇ ಶನಿವಾರ ಬೆಳಿಗ್ಗೆ 9.30 ರಿಂದ 3.30ರ ವರೆಗೆ. ನೋಂದಣಿಗೆ : https:// www.dhamma.org/en/schedules/schsukhalaya **emil:** registration @ sukhalaya.dhamma.org. ಸಂಪರ್ಕಿಸಿ : 9880688995, 9591722008, 8989866927, 8762086089.

**ಧಮ್ಮ ವನ ವಿಪಶ್ಯನ ಅಂತರರಾಷ್ಟ್ರೀಯ ಧ್ಯಾನ ಕೇಂದ್ರ**

ನಾಡಪ್ಪನ ಹಳ್ಳಿ, ಕೆ.ಆರ್. ನಗರ, (ತಾ),ಮೈಸೂರು ಜಿಲ್ಲೆ. ಪ್ರತಿ ತಿಂಗಳು 2 ನೇ ಮತ್ತು 4ನೇ ಗುರುವಾರ 3 ದಿನದ ಶಿಬಿರ ಪ್ರಾರಂಭವಾಗಿ ಭಾನುವಾರ ಸಾಯಂಕಾಲ ಕೊನೆಗೊಳ್ಳುತ್ತದೆ. ಹೆಚ್ಚಿನ ಮಾಹಿತಿ ಮತ್ತು ನೋಂದಣಿಗಾಗಿ : https://www. dhamma.org/en/schedules/schvana. ಸಂಪರ್ಕಕ್ಕೆ: 8884566354,8880519658, 8088648226.

**ಧಮ್ಮ ನದಿ ವಿಪಶ್ಯನ ಧ್ಯಾನ ಕೇಂದ್ರ, ಉಡುಪಿ.**

ಪ್ರತಿ ಭಾನುವಾರ ಒಂದು ದಿನದ ಶಿಬಿರ ಇರುತ್ತದೆ. ಸಮಯ ಬೆಳಿಗ್ಗೆ 10.30 ರಿಂದ ಸಾಯಂಕಾಲ 4.00ರ ವರಗೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 9900736473, 9448721822, 7892598326, 9481446643.

**10 ದಿನದ ಶಿಬಿರ ಆಯೋಜಿಸುವವರು ಮತ್ತು ಮಕ್ಕಳಿಗೆ 70ನಿಮಿಷದ ಆನಾಪಾನಾ ಧ್ಯಾನ ಶಿಬಿರ ವ್ಯವಸ್ಥೆ ಮಾಡುವವರು ಸಲಹೆ, ಸೂಚನೆಗಳಿಗಾಗಿ ಸಂಪರ್ಕಿಸಿ : ಸಂತೋಷ ಧರ್ಮರಾಜ್, ಬೆಂಗಳೂರು. ಮೊಬೈಲ್: 8762086089**

**ಇತರೆ ಸ್ಥಳಗಳಲ್ಲಿ ಒಂದು ದಿನದ ಶಿಬಿರಗಳು**

**ಮೈಸೂರು:** ಪ್ರತಿ ತಿಂಗಳು 4ನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 7829912733, 9060300558, 9980105309. **ಉಡುಪಿ:** ಪ್ರತಿ ತಿಂಗಳು ಎರಡನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 9980897955 / 9449773942 9481149553. **ದಾವಣಗೆರೆ:** ಪ್ರತಿ ಭಾನುವಾರ ಹತ್ತು ದಿನದ ಶಿಬಿರ ನಡೆಯುವಾಗ ಬಿಟ್ಟು. ಸಂಪರ್ಕ ಸಂಖ್ಯೆಗಳು: 9844245111 / 9986962762 9448588789 **ಹುಬ್ಬಳ್ಳಿ:** ಪ್ರತಿ ತಿಂಗಳು ಮೂರನೇ ಭಾನುವಾರ. ಸಂಪರ್ಕ ಸಂಖ್ಯೆ: 9880661506, **ಲೋಕಾಪುರ(ಬಾಗಲಕೋಟೆ):** ಮೊದಲ ಅಥವಾ ಎರಡನೇ ಭಾನುವಾರ ಸಂಪರ್ಕಿಸಿ: 9741275657. **ಶಿವಮೊಗ್ಗ, ಸಂಪರ್ಕಿಸಿ :** 8453845690, 9480086856, 9449623606.

**ವಾರದ ಒಂದು ಗಂಟೆಯ ಸಾಮೂಹಿಕ ಧ್ಯಾನ ಶಿಬಿರಗಳ ಮಾಹಿತಿ**

**ಬೆಂಗಳೂರಿನಲ್ಲಿ ಸಾಮೂಹಿಕ ಸಾಧನೆಗಳ ಬಗ್ಗೆ ಮಾಹಿತಿ ತಿಳಿಯಲು ವೆಬ್ ವಿಳಾಸ: http://www.paphulla.dhamma.org/os/paphulla sittings.htm**

**ದಾವಣಗೆರೆ:** ಪ್ರತಿ ಶನಿವಾರ ಸಾಯಂಕಾಲ 5 ರಿಂದ 6 ಸಂಪರ್ಕಿಸಿ: 9448588789, 9844245111, 9986962762. **ಬಳ್ಳಾರಿ:** ಪ್ರತಿ ಗುರುವಾರ ಸಾಯಂಕಾಲ 6 ರಿಂದ 7, ಸಂಪರ್ಕಿಸಿ: 9986677012, **ಬೀದರ್:** ಪ್ರತಿ ಭಾನುವಾರ ಬೆಳಿಗ್ಗೆ 9 ರಿಂದ 10 ಸಂಪರ್ಕಿಸಿ: 9480240088, 9449556529, **ಧಾರವಾಡ:** ಪ್ರತಿ ಭಾನುವಾರ ಬೆಳಿಗ್ಗೆ 8 ರಿಂದ 9 ಸಂಪರ್ಕಿಸಿ: 9035032422, 9483483437, 7406934095, **ಬೆಳಗಾವಿ:** ಪ್ರತಿ ಭಾನುವಾರ ಬೆಳಿಗ್ಗೆ 7 ಇಂದ 8 ಸಂಪರ್ಕಿಸಿ: 9483285511, 9448591755, **ತೀರ್ಥಹಳ್ಳಿ:** ಪ್ರತಿ ಭಾನುವಾರ ಬೆಳಿಗ್ಗೆ 10.30 ರಿಂದ 11.30 ಸಂಪರ್ಕಿಸಿ: 9448814196, **ಮಂಗಳೂರು:** ಪ್ರತಿ ಭಾನುವಾರ ಬೆಳಿಗ್ಗೆ 8 ರಿಂದ 9 ಸಂಪರ್ಕಿಸಿ: 9900736473. **ಶಿವಮೊಗ್ಗ:** ಪ್ರತಿ ಶನಿವಾರ ಸಾಯಂಕಾಲ 5 ರಿಂದ 6. ಸಂಪರ್ಕಿಸಿ: 8453845690, 9480086856, 9449623606.

**ಸೂಳ್ಯ :** ಪ್ರತಿ ಭಾನುವಾರ ಬೆಳಗ್ಗೆ 9.30 ರಿಂದ 10.30 ಸಂಪರ್ಕಿಸಿ : 9448215940.

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು:** ಬಿ.ಪ್ರದೀಪ ಕುಮಾರ, **ಪ್ರಕಾಶಕರು:** ಶ್ರೀಮತಿ ಆರ್. ಚಂದ್ರಮತಿ ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ. **ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070.
**ಗೌರವ ಸಂಪಾದಕರು:** ಜಿ.ಟಿ. ಗೋವಿಂದಪ್ಪ

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor:** G.T. Govindappa,

**ಮುದ್ರಿತ ವಿಷಯ** ತೆರೆದ–ಅಂಚೆ

**ಗೆ,**

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.